ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗುಲಬರ್ಗಾ

ಸಂ:ಕಂ/ಸಿಬ್ಬಂದಿ–1/ಗ್ರಾಲೇ–ನೇಮಕಾತಿ/93/2010–11 ದಿನಾಂಕ:04–08–2011

**: ಪ್ರಕಟಣೆ :**

ವಿಷಯ: ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗೆ ನೇಮಕಾತಿ ಮಾಡಲು ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಕುರಿತಂತೆ ಸ್ಥಳ ಬದಲಾವಣೆ ಮಾಡಿರುವ ಬಗ್ಗೆ.

ಉಲ್ಲೇಖ: ಈ ಕಾರ್ಯಾಲಯದ ಸಮ ಸಂಖ್ಯೆ ಪ್ರಕಟಣೆ ದಿನಾಂಕ: 12–07–2011

*~*~*

ಗುಲಬರ್ಗಾ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಾಧಿಕಾರಿಗಳು ಹುದ್ದೆಗಳಿಗೆ ನೇರ ನೇಮಕಾತಿಯಿಂದ ಭರ್ತಿ ಮಾಡುವ ಕುರಿತಂತೆ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಕಾರ್ಯವನ್ನು ದಿನಾಂಕ:06–08–2011 ರಂದು ಬೆಳಿಗ್ಗೆ 10–00 ಗಂಟೆಯಿಂದ ಸಾ 4–00 ಗಂಟೆಯವರೆಗೆ (ಡಾ:ಎಸ್.ಎಂ.ಪಂಡಿತ ರಂಗಮಂದಿರ, ಜಗತ್ ವೃತ್ತದ ಹತ್ತಿರ ಗುಲಬರ್ಗಾ) ಇಲ್ಲಿ ನಿಗದಿಪಡಿಸಲಾಗಿತ್ತು.

ಆದರೆ ಕಾರಣಾಂತರದಿಂದ ದಾಖಲೆಗಳನ್ನು ಪರಿಶೀಲನಾ ಸ್ಥಳವನ್ನು ಬದಲಾವಣೆ ಮಾಡಬೇಕಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳಿಗೆ ಈ ಮೂಲಕ ಪ್ರಕಟಿಸಿ ಸೂಚಿಸುವುದೇನೆಂದರೆ ಮೂಲ ದಾಖಲಾತಿಗಳ ಪರಿಶೀಲನಾ ಕಾರ್ಯವನ್ನು ಡಾ:ಎಸ್.ಎಂ.ಪಂಡಿತ ರಂಗಮಂದಿರ, ಜಗತ್ ವೃತ್ತದ ಹತ್ತಿರ ಗುಲಬರ್ಗಾ ಇದರ ಬದಲಿಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗುಲಬರ್ಗಾ, ಮಿನಿ ವಿಧಾನ ಸೌಧ, ಮುಖ್ಯ ರಸ್ತೆ, ಗುಲಬರ್ಗಾ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ.

**ಕಾರಣ ಎಲ್ಲಾ ಅರ್ಹರಿರುವ ಅಭ್ಯರ್ಥಿಗಳು ದಿನಾಂಕ:06–08–2011 ರಂದು ಬೆಳಿಗ್ಗೆ 10–00 ಗಂಟೆಯಿಂದ ಸಾ 4–00 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗುಲಬರ್ಗಾ, ಮಿನಿ ವಿಧಾನ ಸೌಧ, ಮುಖ್ಯ ರಸ್ತೆ, ಗುಲಬರ್ಗಾ ಸಭಾಂಗಣದಲ್ಲಿ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ತಿಳಿಸಲಾಗಿದೆ.**

**ಅಪರ ಜಿಲ್ಲಾಧಿಕಾರಿಗಳು,**
**ಗುಲಬರ್ಗಾ**

**ಪ್ರತಿಯನ್ನು:**

1. DIO, NIC, Gulbarga ಇವರಿಗೆ ನೀಡುತ್ತಾ ಸದರಿ ಪ್ರಕಟಣೆಯನ್ನು ಗುಲಬರ್ಗಾ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
2. ಉಪ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ, ಇಲಾಖೆ, ಗುಲಬರ್ಗಾ ಇವರಿಗೆ ನೀಡುತ್ತ ಸದರಿ ಪ್ರಕಟಣೆಯನ್ನು ದಿನಾಂಕ:05–08–2011 ರಂದು ರಾಜ್ಯಾದ್ಯಂತ ಪ್ರಕಟಗೊಳ್ಳಲಿರುವ ಎಲ್ಲಾ ಪ್ರಮುಖ ದಿನ ಪತ್ರಿಕೆಯಲ್ಲಿ ಸರ್ಕಾರಕ್ಕೆ ಯಾವುದೇ ಹೊರೆ ಬೀಳದಂತೆ ಪ್ರಕಟಿಸಲು ಕೋರಿದೆ.